260 (542) ಶ್ರೀ. ಗುರುಸ್ವಾಮಿ ಎ. ಎಸ್. (ಚಾಮುಂಡೇಶ್ವರಿ):- ಮಾನ್ಯ ರೇಷ್ಮೆ ಮತ್ತು ಜವಳಿಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾರ್ಯನಿರತವಾಗಿರುವ ರೇಷ್ಮೆ ಫಾರಂಗಳ ಸಂಖ್ಯೆ ಎಷ್ಟು;

ಆ) ಇದರಲ್ಲಿ ಆದಾಯದಲ್ಲಿರುವ ಫಾರಂಗಳು ಯಾವುವು; ನಷ್ಟದಲ್ಲಿರುವ ಫಾರಂಗಳು ಯಾವುವು; ಆದಾಯ, ನಷ್ಟ ಸಮವಾಗಿರುವ, ಫಾರಂಗಳು ಯಾವುವು;

ಇ) ನಷ್ಟದಲ್ಲಿರುವ ಫಾರಂಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಈ) ಮೈಸೂರು ವಿಶ್ವವಿದ್ಯಾನಿಲಯದ ರೇಷ್ಮೆ ಸಂಶೋಧನಾ ವಿಭಾಗದವರಿಗೆ ಈ ಫಾರಂಗಳಲ್ಲಿ ತರಬೇತಿ ಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೇ

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು):-

ಅ) ಮೈಸೂರು ಜಿಲ್ಲೆಯಲ್ಲಿ 6 ರೇಷ್ಮೆ ಫಾರಂಗಳಿವೆ. ತಾಂಡವಪುರ, ಮೂಗೂರು ನಂಜನಗೂಡು, ಧರ್ಮಾಪುರ, ಹೊರಳಹಳ್ಳಿ ಮತ್ತು ಕಗ್ಗುಂಡಿ.

ಚಾಮರಾಜನಗರ ಜಿಲ್ಲೆಯಲ್ಲಿ 7 ರೇಷ್ಮೆ ಫಾರಂಗಳಿವೆ. ಚಾಮರಾಜನಗರ, ಕುದೇರು, ಉಮ್ಮತ್ತೂರು, ಗಣನೂರು, ಮಂಗಲ, ಬಿ.ಆರ. ಹಿಲ್ಸ್ ಮತ್ತು ಕೊಳ್ಳೇಗಾಲ.

ಆ) ಎರಡು ಜಿಲ್ಲೆಗಳ ಎಲ್ಲಾ ಫಾರಂಗಳು ನಷ್ಟದಲ್ಲಿವೆ.

ಇ) ಇಲ್ಲ.

ಈ) ಮೈಸೂರು ವಿಶ್ವವಿದ್ಯಾನಿಲಯದ ರೇಷ್ಮೆ ಸಂಶೋಧನಾ ವಿಭಾಗದವರಿಂದ ಈ ಬಗ್ಗೆ ಪ್ರಸ್ತಾವನೆ ಬಂದಿರುವುದಿಲ್ಲ. ಅಪೇಕ್ಷಿಸಿದಲ್ಲಿ ತರಬೇತಿ ನೀಡುವ ಬಗ್ಗೆ ಪರಿಗಣಿಸಲಾಗುವುದು.

ನಗರಾಭಿವೃದ್ಧಿ ಪ್ರಾಧಿಕಾರದ ನೌಕರರು

261 (543) ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ) :-ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹಲವಾರು ನಗರಾಭಿವೃದ್ಧಿ ಪ್ರಾಧಿಕಾರಗಳ ನೌಕರರ ಒಂದೇ ಕಡೆ ಕಾರ್ಯನಿರತರಾಗಿದ್ದು ನಿವೃತ್ತಿಯವರೆಗೆ ಅಲ್ಲಿಯೇ ಕೆಲಸ ಮಾಡುವುದರಿಂದ ಸ್ವಹಿತಾಸಕ್ತಿ ಬೆಳೆಸಿಕೊಳ್ಳುವ ಅಪಾಯ ಇಲ್ಲವೇ;

ಆ) ಇದರಿಂದಾಗಿ ಕರ್ತವ್ಯ ನಿಷ್ಠೆಯಲ್ಲಿ ಕೊರತೆ ಸಾರ್ವಜನಿಕ ಕೆಲಸದಲ್ಲಿ ನಿರಾಸಕ್ತಿ ಮತ್ತು ಅಶಿಸ್ತು ಮೈಗೂಡುವುದಿಲ್ಲವೇ?

ಇ) ಈ ಲೋಪಗಳ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಈ ನೌಕರರುಗಳನ್ನು ಬೇರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾವಣೆ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಉ) ಹೌದಾದರೆ ಯಾವಾಗ ಜಾರಿಗೊಳಿಸಲಾಗುವುದು?

ಶ್ರೀ ಬಿ.ಬಿ. ಬೆಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು)

ಅ) ಅಭಿವೃದ್ಧಿ ಪ್ರಾಧಿಕಾರದ ಹೆಚ್ಚಿನ ಸಂಖ್ಯೆಯ ನೌಕರರು ಅದೇ ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೃತ್ತಿ ಹೊಂದುತ್ತಾರೆ.

ಆ) ಅಂತಹ ಘಟನೆಗಳು ಇದುವರೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಕಾಯದೆ 1987ರಲ್ಲಿ ಅಭಿವೃದ್ಧಿ ಪ್ರಾಧಿಕಾರದ ನೌಕರರನ್ನು ಒಂದು ಅಭಿವೃದ್ಧಿ ಪ್ರಾದಿಕಾರದಿಂದ ಇನ್ನೊಂದು ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸಲು ವಕಾಶವಿದೆ. ಅಭಿವೃದ್ಧಿ ಪ್ರಾಧಿಕಾರದ ವ್ಯಂದ ಮತ್ತು ನೇಮಕಾತಿ ನಿಯಮಗಳನ್ನು ಸೃಜಿಸುವ ವಿಷಯ ಪರಿಶೀಲನೆಯಲ್ಲಿದೆ. ಇದು ಅಂತಿಮವಾಗಿ ತೀರ್ಮಾನವಾದ ಕೂಡಲೇ ಒಂದು ಪ್ರಾಧಿಕಾರದಿಂದ ಇನ್ನೊಂದು ಪ್ರಾಧಿಕಾರಕ್ಕೆ ವರ್ಗಾಯಿಸುವ ವಿಷಯಕ್ಕೆ ಅಂತಿಮ ರೂಪ ಕೊಟ್ಟಂತಾಗುತ್ತದೆ.

ಪುರಸಭೆ ನಗರಪಾಲಿಕೆಗಳನ್ನು ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುವುದರಿಂದ ಆಗುವ ತೊಂದರೆ

262 (545) ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಪುರಸಭೆ ನಗರಪಾಲಿಕೆ ಮುಂತಾದ ಸ್ಥಳದಲ್ಲಿ ಕಾರ್ಯನಿರ್ವಹಿಸುವ ನೌಕರರು ಒಂದೇ ಸ್ಥಳದಲ್ಲಿ ಕಾರ್ಯ ನಿರ್ವಹಿಸುವುದರಿಂದ ಸ್ವಹಿತಾಸಕ್ತಿ ಬೆಳೆಸಿಕೊಳ್ಳುವ ಅಪಾಯ ಇಲ್ಲವೇ?

ಆ) ಇದರಿಂದಾಗಿ ಕೆಲಸದಲ್ಲಿ ನಿರಾಸಕ್ತಿ, ಆಶಿಸ್ತು ಮತ್ತು ನಿಷ್ಪೆ ಕೊರತೆ ಕಂಡುಬರುವುದಿಲ್ಲವೆ?

ಇ) ಇದರ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಈ) ಈ ನೌಕರರನ್ನು ಬೇರೆ ಪುರಸಭೆ, ನಗರಸಭೆಗೆ ವರ್ಗಾವಣೆ ಮಾಡುವ ಪ್ರಸ್ತಾವ ಸರ್ಕಾರದ ಪರಿಶೀನೆಯಲ್ಲಿದೆಯೇ?

ಉ) ಹೌದಾದರೆ ಯಾವಾಗ ಜಾರಿಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು)

ಅ) ಹೌದು